# ಕರ್ನಾಟಕ ಸರ್ಕಾರ

# ಸಾರಿಗೆ ಇಲಾಖೆ

# TRANSPORT DEPARTMENT

## ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ,

ಮಂತ್ರಾಲಯ ರೋಡ್, ರಾಯಚೂರು–584101.

ಕಛೇರಿ ಪ್ರಾರಂಭವಾದ ದಿನಾಂಕ: 03–10–1974

DATE OF OFFICE OPENED: 03-10-1974

ಮಾಹಿತಿ ಹಕ್ಕು ಕಾಯಿದೆ ಅಧಿನಿಯಮ 2005ರ

4(1)(ಬಿ) ದಾಖಲೆಗಳ ವಿವರ

(31.03.2017 ರಲ್ಲಿರುವಂತೆ)

**ಕರ್ನಾಟಕ ಸರ್ಕಾರ**

**ಸಾರಿಗೆ ಇಲಾಖೆ**

**ಮಾಹಿತಿ ಹಕ್ಕು ಅಧಿನಿಯಮ 2005 – ಅಧ್ಯಾಯ 2 ನಿಯಮ 4(1)ಬಿ ಪ್ರಕಾರ ಪ್ರಕಟಿಸಿದ ಮಾಹಿತಿ**

I.4(ಬಿ)1. ಅದರ ರಚನೆ, ಕಾರ್ಯಗಳು ಮತ್ತು ಕರ್ತವ್ಯಗಳ ವಿವರಗಳು:

ಸಂಘಟನೆ:– ಪ್ರಾದೇಶಿಕ ಸಾರಿಗೆ ಅಧಿಕಾರಿಯವರು ಈ ಕಛೇರಿಯ ಮುಖ್ಯಸ್ಥರಾಗಿರುತ್ತಾರೆ. ಮತ್ತು ಈ ಕೆಳಕಂಡ ಅಧಿಕಾರಿಗಳು ಇವರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಾರೆ.

**ಮಂಜೂರಾಗಿರುವ ಹುದ್ದೆಗಳು**

| | |
|---|---|
| **ಅ) ಪ್ರಾದೇಶಿಕ ಸಾರಿಗೆ ಅಧಿಕಾರಿ** | – 1 |
| ಆ) ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು | – |
| ಇ) ಖಜಾನೆ ಅಧಿಕಾರಿಗಳು | – |
| ಈ) ಹಿರಿಯ ಮೋಟಾರು ವಾಹನ ನಿರೀಕ್ಷಕರು | – 2 |
| ಉ) ಮೋಟಾರು ವಾಹನ ನಿರೀಕ್ಷಕರು | – 2 |
| ಊ) ಕಛೇರಿ ಅಧೀಕ್ಷಕರು | – 2 |
| ಋ) ಪ್ರಥಮ ದರ್ಜೆ ಸಹಾಯಕರು | – 4 |
| ೠ) ದ್ವಿತೀಯ ದರ್ಜೆ ಸಹಾಯಕರು | – 6 |
| ಎ) ಶೀಘ್ರಲಿಪಿಗಾರರು | – 1 |
| ಏ) ಬೆರಳಚ್ಚುಗಾರರು | – 1 |
| ಐ) ವಾಹನ ಚಾಲಕರು | – 2 |
| ಒ) ಗ್ರೂಫ್ 'ಡಿ' ನೌಕರರು | – 6 |

ಈ ಕಛೇರಿಯಲ್ಲಿ ಮುಖ್ಯವಾಗಿ ಸಾರಿಗೆ ಮತ್ತು ಸಾರಿಗೇತರ ವಾಹನಗಳ ನೋಂದಣಿ, ತೆರಿಗೆ ವಸೂಲಾತಿ, ಕಲಿಕಾ ಚಾಲನಾ ಅನುಜ್ಞಾ ಪತ್ರ, ಚಾಲನಾ ಅನುಜ್ಞಾ ಪತ್ರ ಮತ್ತು ವಾಹನಗಳ ಉಪಯೋಗದ ನಿಯಂತ್ರಣದ ಬಗ್ಗೆ ಈ ಕೆಳಕಂಡ ಕಾಯ್ದೆ ನಿಯಮದ ಅಡಿಯಲ್ಲಿ ಕಾರ್ಯ ನಿರ್ವಹಿಸಲಾಗುತ್ತದೆ.

1. ಮೋಟಾರು ವಾಹನಗಳ ಅಧಿನಿಯಮ 1988
2. ಕೇಂದ್ರ ಮೋಟಾರು ವಾಹನಗಳ ಕಾಯ್ದೆ ನಿಯಮಗಳು, 1989
3. ಕರ್ನಾಟಕ ಮೋಟಾರು ವಾಹನ ನಿಯಮಗಳು 1989
4. ಕರ್ನಾಟಕ ಮೋಟಾರು ವಾಹನ ತೆರಿಗೆ ಕಾಯ್ದೆ ಮತ್ತು ನಿಯಮಗಳು 1957 ಮತ್ತು ಸಂಬಂಧಿಸಿದ ತಿದ್ದುಪಡಿಗಳು.

**ಪ್ರಮುಖ ಕಾರ್ಯಗಳು:–**

1. ವಾಹನಗಳ ನೋಂದಣಿ.
2. ಚಾಲನಾ ಹಾಗೂ ನಿರ್ವಾಹಕ ಅನುಜ್ಞಾ ಪತ್ರಗಳನ್ನು ನೀಡುವಿಲೆ.
3. ಸರಕು ಸಾಗಣೆ ಹಾಗೂ ಪ್ರಯಾಣಿಕ ವಾಹನಗಳಿಗೆ ರಹದಾರಿಗಳನ್ನು ನೀಡುವಿಕೆ.
4. ಮೋಟಾರು ವಾಹನಗಳ ತೆರಿಗೆ ಸಂಗ್ರಹಣೆ.
5. ಮೋಟಾರು ವಾಹನ ನಿಯಮಗಳ ಪ್ರವರ್ತನೆ.
6. ರಸ್ತೆ ಸುರಕ್ಷತಾ ಕ್ರಮಗಳು.
7. ವಾಹನಗಳಿಂದಾಗುವ ವಾಯು ಮಾಲಿನ್ಯ ನಿಯಂತ್ರಣದ ಬಗ್ಗೆ ಪ್ರವರ್ತನೆ.
8. ರಾಜಸ್ವವನ್ನು ಸಂಗ್ರಹಿಸುವುದು.

## II.4(ಬಿ)2. ಅದರ ಅಧಿಕಾರಿಗಳ ಮತ್ತು ನೌಕರರ ಕರ್ತವ್ಯಗಳು:

**ಕಛೇರಿ ವಿಳಾಸ:** ಪ್ರಾದೇಶಿಕ ಸಾರಿಗೆ ಅಧಿಕಾರಿ ಹಾಗೂ ಕಾರ್ಯದರ್ಶಿ, ಪ್ರಾದೇಶಿಕ ಸಾರಿಗೆ ಪ್ರಾಧಿಕಾರ ಮತ್ತು ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಕಛೇರಿ, ರಾಯಚೂರು-584101.

1. **ಉಪ ಸಾರಿಗೆ ಆಯುಕ್ತರು ಮತ್ತು ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು:-**

1. **ಲೆಕ್ಕಾಧೀಕ್ಷಕರು:**
ಕಛೇರಿಯ ಖಜಾನೆ ವಿಭಾಗದಲ್ಲಿ ಸಾರ್ವಜನಿಕರು ಪಾವತಿಸುವ ತೆರಿಗೆ/ಶುಲ್ಕಗಳಿಗೆ ರಶೀತಿ ನೀಡಿರುವುದು ಹಾಗೂ ಅದರಂತೆ ವಿವರವನ್ನು ನಗದು ವಹಿಯಲ್ಲಿ ದಾಖಲಿಸಿರುವುದನ್ನು ತಾಳೆ ಮಾಡಿ ಲೆಕ್ಕ ಕ್ರಮಬದ್ಧವಾಗಿರುವುದನ್ನು ಪರಿಶೀಲಿಸುವುದು, ರಾಜಸ್ವ ಸಂಗ್ರಹ ಅಂಕಿ-ಅಂಶಗಳನ್ನು ನಿರ್ವಹಣೆ ಮಾಡುವುದು, ವಾಹನಗಳ ಮೇಲಿರುವ ಆಡಿಟ್ ಆಕ್ಷೇಪಣೆಗಲ್ಲಿರುವ ಮೊಬಲಗನ್ನು ವಸೂಲಿಸಿ ಮುಕ್ತಾಯಗೊಳಿಸುವ ನಿಟ್ಟಿನಲ್ಲಿ ಕಛೇರಿಯ ಕೆಲಸಕ್ಕಾಗಿ ಬರುವ ಅರ್ಜಿ/ಕಡತಗಳನ್ನು ಎಲ್ಲಾ ಹಂತದಲ್ಲಿ ಪರಿಶೀಲಿಸುವುದು.
2. **ಕಛೇರಿ ಅಧೀಕ್ಷಕರು:-** ಕಛೇರಿಯ ಅಧೀಕ್ಷಕರು ಸಾರ್ವಜನಿಕರು ಸಲ್ಲಿಸುವ ವಿವಿಧ ಕಛೇರಿ ಕೆಲಸಗಳ ಅರ್ಜಿಗಳನ್ನು ಪರಿಶೀಲಿಸಿ ಸ್ವೀಕರಿಸುವುದು. ದೈನಂದಿನ ರಾಜಸ್ವ ವಸೂಲಾತಿಯ ಅಂಕಿ ಅಂಶಗಳ ಸಂಗ್ರಹಣೆ ಸೇರಿದಂತೆ ಒಟ್ಟಾರೆಯಾಗಿ ಕಛೇರಿಯ ಸಿಬ್ಬಂದಿಗಳ ಕೆಲಸ ಕಾರ್ಯಗಳ ಮೇಲ್ವಿಚಾರಣೆ ಹಾಗೂ ಮೇಲಾಧಿಕಾರಿಗಳು ನೀಡಿದ ಆದೇಶ ಪಾಲಿಸುವುದು..
3. **ಶೀಘ್ರಲಿಪಿಗಾರರು:**
ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಆಪ್ತ ಸಹಾಯಕರಾಗಿ ಕೆಲಸ ನಿರ್ವಹಿಸುವುದು ಮತ್ತು ಕಛೇರಿಯಲ್ಲಿ ನಡೆಯುವ ಎಲ್ಲಾ ಸಭೆಗಳ ಸೂಚಿಪಟ್ಟಿ ಮತ್ತು ನಡಾವಳಿಗಳನ್ನು ತಯಾರಿಸುವುದು.
4. **ಪ್ರಥಮ/ದ್ವಿತೀಯ ದರ್ಜೆ ಸಹಾಯಕರು:-** ಕಛೇರಿಯ ಅಧೀಕ್ಷಕರು/ಮೇಲಾಧಿಕಾರಿಗಳು ಸ್ವೀಕರಿಸಿದ ಅರ್ಜಿಗಳನ್ನು ಪರಿಶೀಲಿಸಿ ಕಡತದೊಂದಿಗೆ ಮುಂದಿನ ಆದೇಶಕ್ಕಾಗಿ ಕಛೇರಿ ಅಧೀಕ್ಷಕರಿಗೆ ಸಲ್ಲಿಸುವುದು. ಕಡತದಲ್ಲಿ ಮೇಲಾಧಿಕಾರಿಗಳು ನೀಡಿದ ಆದೇಶವನ್ನು ಪಾಲಿಸಿ ಸಾರ್ವಜನಿಕರ ಕೆಲಸಕಾರ್ಯಗಳನ್ನು ನಿರ್ವಹಿಸುವುದು. ಖಜಾನೆಯಲ್ಲಿ ಗಣಿಕ ಯಂತ್ರಗಳಲ್ಲಿ ತೆರಿಗೆ ದಂಡ ಮತ್ತು ವಿವಿಧ ಶುಲ್ಕಗಳನ್ನು ಸರ್ವಜನಿಕರಿಂದ ಸ್ವೀಕರಿಸುವುದು. ವಸೂಲು ಮಾಡಿದ ರಾಜಸ್ವವನ್ನು ಬ್ಯಾಂಕಿಗೆ ಬಟವಾಡೆ ಮಾಡುವುದು ಸಂಗ್ರಹಿಸಿದ ರಾಜಸ್ವವನ್ನು ಜಿಲ್ಲಾ ಖಜಾನೆಯಲ್ಲಿ ಭದ್ರ ಕೋಣೆಯಲ್ಲಿ ಇಡುವುದು.
5. **ಬೆರಳಚ್ಚುಗಾರರು:-** ಕಛೇರಿಯಿಂದ ಹೊರಡಿಸುವ ಎಲ್ಲಾ ಪತ್ರಗಳನ್ನು ಬೆರಳಚ್ಚು ಮಾಡುವುದು. ರಹದಾರಿ ಪರವಾನಿಗೆಗಳನ್ನು ಬೆರಳಚ್ಚಿಸುವುದು ಹಾಗೂ ಮೇಲಾಧಿಕಾರಿಗಳು ಹೇಳಿದ ಇತರೆ ಕೆಲಸಗಳನ್ನು ನಿರ್ವಹಿಸುವುದು.
6. **ವಾಹನ ಚಾಲಕರು:-** ಕಛೇರಿಯ ಎಲ್ಲಾ ಕೆಲಸ ಕಾರ್ಯಗಳಿಗೆ ನಿಗಧಿಪಡಿಸಿದ ವಾಹನವನ್ನು ಚಲಿಸುವುದು.
7. **'ಡಿ' ಗ್ರೂಪ್ ನೌಕರರು(ಜವಾನರು):-** ಸ್ಥಳೀಯ ಟಪಾಲನ್ನು ವಿತರಿಸುವುದು ಹಾಗೂ ಮೇಲಾಧಿಕಾರಿಗಳ ಆದೇಶದ ಮೇರೆಗೆ ಕೆಲಸ ನಿರ್ವಹಿಸುವುದು.

## III. 4(ಬಿ)3. ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆಯ ಮಾರ್ಗಗಳು ಸೇರಿದಂತೆ ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಕಾರ್ಯ ವಿಧಾನಗಳು.

ಸಾರ್ವಜನಿಕರು ವಿವಿಧ ಕೆಲಸಗಳಿಗಾಗಿ ಕಛೇರಿಗೆ ಸಲ್ಲಿಸುವ ಅರ್ಜಿಗಳನ್ನು ನಿಯಮಾನುಸಾರ ಕಛೇರಿಯಲ್ಲಿನ ಅಧೀಕ್ಷಕರುಗಳು ಪರಿಶೀಲಿಸಿ ಸ್ವೀಕರಿಸಿರುತ್ತಾರೆ. ತದನಂತರ ಕಛೇರಿಯ ಸ್ವೀಕೃತಿ ವಿಭಾಗದ ಮುಖಾಂತರ ಆಯಾ ವಿಭಾಗಗಳನ್ನು ನಿರ್ವಹಿಸುವ ವಿಷಯ ನಿರ್ವಾಹಕರು ತಮಗೆ ಸಂಬಂಧಿಸಿದ ಅರ್ಜಿಗಳನ್ನು ಕಡತದಲ್ಲಿ ಟಿಪ್ಪಣಿಯೊಂದಿಗೆ

ವಿಷಯವನ್ನು ಮಂಡಿಸುತ್ತಾರೆ. ನಂತರ ಅದನ್ನು ಸಂಬಂಧಿಸಿದ ಅಧೀಕ್ಷಕರು ಪರಿಶೀಲಿಸಿ ತಮ್ಮ ಟಿಪ್ಪಣಿಯನ್ನು ಮಂಡಿಸಿದ ನಂತರ ಅಂತಿಮವಾಗಿ ಸಕ್ಷಮ ಪ್ರಾಧಿಕಾರದ ಅಧಿಕಾರಸ್ಥರು ಸದರಿ ವಿಷಯದ ಕಡತಕ್ಕೆ ತಮ್ಮ ತೀರ್ಮಾನದ ಆದೇಶವನ್ನು ನೀಡುತ್ತಾರೆ. ಸದರಿಯವರು ನೀಡಿದ ಆದೇಶವನ್ನು ಅಂತಿಮವಾಗಿ ವಿಷಯ ನಿರ್ವಾಹಕರು ಮತ್ತು ಅಧೀಕ್ಷಕರುಗಳು ಪಾಲಿಸುತ್ತಾರೆ ಮತ್ತು ಸಂಬಂಧಿಸಿದ ಕಡತಗಳನ್ನು ನಿರ್ವಹಿಸುತ್ತಿರುತ್ತಾರೆ.

ಕೆಲವೊಂದು ವಿಷಯಗಳಿಗೆ ಸಂಬಂಧಿಸಿದ ಕೆಲಸಗಳಿಗೆ ಕಛೇರಿಯ ತಾಂತ್ರಿಕ ಸಿಬ್ಬಂದಿಗಳಾದ ಹಿರಿಯ/ಮೋಟಾರು ವಾಹನ ನಿರೀಕ್ಷಕರುಗಳ ಪರಿಶೀಲನೆ ಅವಶ್ಯಕವಾಗಿದ್ದು, ಅಂತಹ ಅರ್ಜಿಗಳನ್ನು ಕಛೇರಿ ಅಧೀಕ್ಷಕರು ಪರಿಶೀಲಿಸಿ ಸ್ವೀಕರಿಸಿದ ನಂತರ ತಾಂತ್ರಿಕ ಸಿಬ್ಬಂದಿಗಳು ತಾವು ಸಹ ವಾಹನವನ್ನು/ಅಭ್ಯರ್ಥಿಗಳನ್ನು ಭೌತಿಕವಾಗಿ ತಾಂತ್ರಿಕವಾಗಿ ಪರಿಶೀಲಿಸಿ ಸಕ್ಷಮ ಪ್ರಾಧಿಕಾರದ ಅಧಿಕಾರಿಗಳಿಗೆ ಶಿಫಾರಸ್ಸುಗಳೊಂದಿಗೆ ಮಂಡಿಸುತ್ತಾರೆ. ಅಂತಿಮವಾಗಿ ಸಕ್ಷಮ ಪ್ರಾಧಿಕಾರದ ಅಧಿಕಾರಸ್ಥರು ತೀರ್ಮಾನ ತೆಗೆದುಕೊಂಡು ಅಂತಹ ಕಡತಗಳಿಗೆ ಆದೇಶ ಮಾಡುತ್ತಾರೆ. ಸದರಿಯವರ ಆದೇಶವನ್ನು ವಿಷಯ ನಿರ್ವಾಹಕರು ಹಾಗೂ ಅಧೀಕ್ಷಕರುಗಳು ಅಂತಿಮವಾಗಿ ಪಾಲಿಸುತ್ತಾರೆ. ಮತ್ತು ಸಂಬಂಧಿಸಿದ ಕಡತಗಳನ್ನು ನಿರ್ವಹಿಸುತ್ತಾರೆ.

## IV. 4(ಬಿ). ಅದರ ಕಾರ್ಯಗಳ ನಿರ್ವಹಣೆಗೆ ಅದು ರೂಪಿಸಿರುವ ಸೂತ್ರಗಳು:

ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಮತ್ತು ಅವರ ಅಧೀನದಲ್ಲಿ ಬರುವ ಸಿಬ್ಬಂದಿಯವರು ಈ ಕೆಳಕಂಡ ಕಾಯ್ದೆ ಮತ್ತು ನಿಯಮದಡಿಯಲ್ಲಿ ಕರ್ತವ್ಯ ನಿರ್ವಹಿಸಲಾಗುತ್ತದೆ.

1. ಮೋಟಾರು ವಾಹನಗಳ ಅಧಿನಿಯಮ 1988.
2. ಕೇಂದ್ರ ಮೋಟಾರು ವಾಹನಗಳ ಕಾಯ್ದೆ ನಿಯಮಗಳು 1989.
3. ಕರ್ನಾಟಕ ಮೋಟಾರು ವಾಹನ ನಿಯಮಗಳು, 1989.
4. ಕರ್ನಾಟಕ ಮೋಟಾರು ವಾಹನ ತೆರಿಗೆ ಅಧಿನಿಯಮ ಮತ್ತು ನಿಯಮಗಳು 1957 ಮತ್ತು ಸಂಬಂಧಿಸಿದ ತಿದ್ದುಪಡಿಗಳು.

## V. 4(ಬಿ)5. ಅದರ ಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ಅದು ಹೊಂದಿರುವ ಅಥವಾ ಅದರ ನಿಯಂತ್ರಣದಲ್ಲಿರುವ ಅಥವಾ ಅದರ ಉದ್ಯೋಗಿಗಳು ಬಳಸುವ ನಿಯಮಗಳು, ಉಪ ನಿಯಮಗಳು, ಅನುಸೂಚಿಗಳು, ಕೈಪಿಡಿಗಳು ಮತ್ತು ದಾಖಲೆಗಳು:

1. ಕೇಂದ್ರ ಮೋಟಾರು ವಾಹನಗಳ ಕಾಯ್ದೆ 1988.
2. ಕೇಂದ್ರ ಮೋಟಾರು ವಾಹನಗಳ ಕಾಯ್ದೆ ನಿಯಮಗಳು 1989.
3. ಕರ್ನಾಟಕ ಮೋಟಾರು ವಾಹನ ನಿಯಮಗಳು, 1989.
4. ಕರ್ನಾಟಕ ಮೋಟಾರು ವಾಹನ ತೆರಿಗೆ ಕಾಯ್ದೆ ಮತ್ತು ನಿಯಮಗಳು 1957 ಮತ್ತು ಸಂಬಂಧಿಸಿದ ತಿದ್ದುಪಡಿಗಳು.
5. ಕೆ.ಸಿ.ಎಸ್.ಆರ್.
6. ಸಿ.ಸಿ.ಎ.
7. ಕೆ.ಎಫ್.ಸಿ.
8. ಕೆ.ಟಿ.ಸಿ.

9. ಕಛೇರಿ ಕೈಪಿಡಿ ಮತ್ತು ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸಿರುವ ಅಧಿಸೂಚನೆಗಳು, ಸುತ್ತೋಲೆಗಳು ಮತ್ತು ಇತರೆ ಆದೇಶ ಸೂಚನೆ ಸಲಹೆಗಳನ್ವಯ ನಾಗರೀಕ ಸನ್ನಧಿನಲ್ಲಿ ಸೂಚಿಸಲ್ಪಟ್ಟಂತೆ ನಿಯಮಗಳು, ಅಧಿನಿಯಮಗಳು ಮತ್ತು ವಿಧಾನಗಳನ್ನು ಅಳವಡಿಸಿಕೊಂಡಂತೆ ಕಾರ್ಯನಿರ್ವಹಿಸಲಾಗುತ್ತಿದೆ.

VI. 4(ಬಿ) **6. ಅದು ಹೊಂದಿರುವ ಅಥವಾ ಅದರ ನಿಯಂತ್ರಣದಲ್ಲಿರುವ ದಸ್ತಾವೇಜುಗಳ ಪ್ರವರ್ಗಗಳ ವಿವರ ಪಟ್ಟಿ.**

ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ತಮ್ಮ ಅಧೀನ ವ್ಯಾಪ್ತಿಯಲ್ಲಿ ಬರುವ ಸಾರ್ವಜನಿಕರ ಅರ್ಜಿಗಳನ್ನು ಪರಿಶೀಲಿಸಿ ಈ ಕೆಳಕಂಡ ಪ್ರಮುಖ ಕಾರ್ಯಗಳನ್ನು ನಿರ್ವಹಿಸಿ ಕೆಳಕಂಡ ದಸ್ತಾವೇಜುಗಳನ್ನು ಹೊಂದಿರುತ್ತಾರೆ.

1. ವಾಹನಗಳ ನೋಂದಣಿ ವಿವರಗಳು.
2. ಚಾಲನಾ ಹಾಗೂ ನಿರ್ವಾಹಕ ಅನುಜ್ಞಾಪತ್ರಗಳನ್ನು ನೀಡಿರುವ ವಿವರಗಳು.
3. ಸರಕು ಸಾಗಣೆ ಹಾಗೂ ಪ್ರಯಾಣಿಕ ವಾಹನಗಳಿಗೆ ರಹದಾರಿಗಳನ್ನು ನೀಡಿರುವ ವಿವರಗಳು.
4. ಮೋಟಾರು ವಾಹನಗಳ ತೆರಿಗೆ ಸಂಗ್ರಹಣೆ ವಿವರಗಳು.
5. ಮೋಟಾರು ವಾಹನ ನಿಯಮಗಳ ಪ್ರವರ್ತನ ಚಟುವಟಿಕೆ ವಿವರಗಳು.
6. ರಸ್ತೆ ಸುರಕ್ಷತಾ ಕ್ರಮಗಳು.
7. ವಾಹನಗಳಿಂದಾಗುವ ವಾಯು ಮಾಲಿನ್ಯ ನಿಯಂತ್ರಣದ ಬಗ್ಗೆ ಪ್ರವರ್ತನ ವಿವರಗಳು.
8. ರಾಜಸ್ವವನ್ನು ಸಂಗ್ರಹಿಸಿದ ವಿವರಗಳು.

   ಈ ಕಛೇರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಮುಖ್ಯಸ್ಥರಾಗಿ ಆಡಳಿತ ಸಂಪೂರ್ಣ ಜವಾಬ್ದಾರಿ ಹೊಂದಿರುತ್ತಾರೆ.

VII. 4(ಬಿ)**7. ಅದರ ಕಾರ್ಯನೀತಿಯ ರಚನೆ ಅಥವಾ ಅದರ ಅನುಷ್ಠಾನಕ್ಕೆ ಸಂಬಂಧಿಸಿದಂತೆ.**

ಸಾರ್ವಜನಿಕರೊಡನೆ ಸಮಾಲೋಚಿಸಲು ಅಥವಾ ಅದರ ಪ್ರಾತಿನಿಧ್ಯವಿರುವಂತೆ ಮಾಡಲು ಇರುವಂತಹ ಯಾವುದೇ ವ್ಯವಸ್ಥೆಯ ವಿವರಗಳು.

ಸಹಾಯಕ ಮೇಜು, ಸಾರ್ವಜನಿಕ ಸಂಪರ್ಕಾಧಿಕಾರಿ, ಸಲಹಾ ದೂರು ಪೆಟ್ಟಿಗೆ, ಪ್ರತಿ ಮಾಹೆ ನಿರ್ವಹಿಸುವ ಸಾರ್ವಜನಿಕ ಕುಂದುಕೊರತೆ ಮತ್ತು ಫೋನ್ ಇನ್ ಕಾರ್ಯಕ್ರಮಗಳು, ಇತ್ಯಾದಿ.

ಸಹಾಯಕ ಮೇಜುವಿನಲ್ಲಿ 02 ಅಧೀಕ್ಷಕರು

- 01 ಸಹಾಯಕರು
- 01 'ಡಿ' ಗ್ರೂಪ್ ನೌಕರರುಗಳು ಸಾರ್ವಜನಿಕರಿಗೆ ಅವಶ್ಯವಾದ ಇಲಾಖೆಗೆ ಸಂಬಂಧಪಟ್ಟ ಎಲ್ಲಾ ಅರ್ಜಿ ನಮೂನೆಗಳನ್ನು ನೀಡುವುದರ ಜೊತೆಗೆ ಸಾರ್ವಜನಿಕ ಕೆಲಸಕಾರ್ಯಗಳು ಸುಸೂತ್ರವಾಗಿ ಆಗಲು ಕರ್ತವ್ಯ ನಿರ್ವಹಿಸುತ್ತಾರೆ.

ಸಾರ್ವಜನಿಕ ಸಂಪರ್ಕಾಧಿಕಾರಿ – ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ (ಡಿ.ಎಲ್.ವಿಭಾಗ)

ದೂರವಾಣಿ ಸಂಖ್ಯೆ – 08532–223329

ಫ್ಯಾಕ್ಸ್ ಸಂಖ್ಯೆ – 08532–223329

ಇ ಮೇಲ್ – rto.rcr--ka@nic.in

4(ಬಿ) 8. ಮಂಡಳಿಗಳು, ಪರಿಷತ್ತುಗಳು, ಸಮಿತಿಗಳು ಅಥವಾ ಇತರ ನಿಯಮಗಳು ಮತ್ತು ಅದರ ಭಾಗವಾಗಿ ಅಥವಾ ಅದರ ಸಲಹೆಯ ಉದ್ದೇಶಕ್ಕಾಗಿ ರಚಿತವಾದ ಇಬ್ಬರು

ಅಥವಾ ಹೆಚ್ಚು ವ್ಯಕ್ತಿಗಳನ್ನೊಳಗೊಂಡ ಮಂಡಳಿಗಳ, ಪರಿಷತ್ತುಗಳ, ಸಮಿತಿಗಳ ಮತ್ತು ಇತರ ನಿಯತಕಾಲಿಕೆ ಸಭೆಗಳು ಸಾರ್ವಜನಿಕರಿಗೆ ಮುಕ್ತವಾಗಿರುತ್ತವೆಯೇ ಅಥವಾ

ಅಂತಹ ಸಭೆಗಳ ನಡಾವಳಿಗಳು ಸಾರ್ವಜನಿಕರಿಗೆ ದೊರೆಯುತ್ತವೆಯೇ ಎಂಬುದರ ವಿವರ ಪಟ್ಟಿ. ಕಲಬುರಗಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಕಾರ್ಯನಿರ್ವಹಿಸುತ್ತಿದೆ.

ಪ್ರಾಧಿಕಾರವು ಈ ಕೆಳಕಂಡವರನ್ನು ಒಳಗೊಂಡಿರುತ್ತದೆ.

1. ಅಧ್ಯಕ್ಷರು, ಜಿಲ್ಲಾಧಿಕಾರಿಗಳು.
2. ಸದಸ್ಯರು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು.
3. ಕಾರ್ಯದರ್ಶಿ, ಪ್ರಾದೇಶಿಕ ಸಾರಿಗೆ ಅಧಿಕಾರಿ.

ಪ್ರಾದೇಶಿಕ ಸಾರಿಗೆ ಪ್ರಾಧಿಕಾರಿ, ರಾಯಚೂರು–584101 ಕರ್ನಾಟಕ ಮೋಟಾರು ವಾಹನ ನಿಯಮ 1989 ನಿಯಮ (55)ರ ಅಡಿಯಲ್ಲಿ ಸಾರಿಗೆ ವಾಹನಗಳ ರಹದಾರಿ ನೀಡುವ ಅಧಿಕಾರ ಹೊಂದಿರುತ್ತಾರೆ. ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಕಾಲಕಾಲಕ್ಕೆ ಸಭೆ ನಡೆಸುತ್ತಿದ್ದು, ಈ ಸಭೆಗಳ ಎಲ್ಲಾ ನಡಾವಳಿಗಳು ಸಾರ್ವಜನಿಕರಿಗೆ ಲಭ್ಯವಿರುತ್ತವೆ ಮತ್ತು ಕೋರಿದಾಗ ಅವುಗಳ ಪ್ರತಿ ನೀಡಲಾಗುತ್ತಿದೆ.

ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿರುವ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಯು ಈ ಕೆಳಕಂಡ ಸದಸ್ಯರನ್ನೊಳಗೊಂಡಿರುತ್ತದೆ.

<u>ಸದಸ್ಯರುಗಳು</u>

1) ಪೊಲೀಸ್ ಅಧೀಕ್ಷಕರು, ರಾಯಚೂರು
2) ಮುಖ್ಯ ಕಾಯದರ್ಶಿಗಳು, ಜಿಲ್ಲಾ ಪರಿಷತ್, ರಾಯಚೂರು
3) ಕಾರ್ಯಪಾಲಕ ಅಭಿಯಂತರರು,ಲೋಕೋಪಯೋಗಿ ಇಲಾಖೆ, ರಾಯಚೂರು ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ,
4) ಪ್ರಾದೇಶಿಕ ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ರಾಯಚೂರು.
5) ಸಹಾಯಕ ನಿರ್ದೇಶಕರು, ಪಟ್ಟಣ ಯೋಜನೆ, ರಾಯಚೂರು
6) ಆಯುಕ್ತರು, ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರ.
7) ಜಿಲ್ಲಾ ವಾರ್ತಾ ಪ್ರಚಾರಾಧಿಕಾರಿಗಳು, ರಾಯಚೂರು

<u>ಸದಸ್ಯ ಕಾರ್ಯದರ್ಶಿ</u>

8) ಪ್ರಾದೇಶಿಕ ಸಾರಿಗೆ ಅಧಿಕಾರಿ, ರಾಯಚೂರು.

IX. 4( ಬಿ) **9. ಅಧಿಕಾರಿಗಳ ಮತ್ತು ನೌಕರರ ನಿರ್ದೇಶಿಕೆ.**

| ಕ್ರ.ಸಂ. | ಪದನಾಮ | ಹುದ್ದೆ | ದೂರವಾಣಿ ಸಂಖ್ಯೆ |
|---|---|---|---|
| 1 | ಕೆ. ದಾಮೋದರ | .ಪ್ರಾ.ಸಾ.ಅ. (ಪ್ರಭಾರಿ) | 08532–223329 |
| 2 | ವೆಂಟೇಶ್ವರ ರಾವ್ | ಹಿ.ಮೋ.ವಾ.ನಿ | 08532–223329 |
| 3 | ಬಿ. ಆರ್. ಪೋಲಿಸ್ ಪಾಟೀಲ್ | ಹಿ.ಮೋ.ವಾ.ನಿ | 08532–223329 |
| 4 | ಬಿ. ಶಂಕ್ರಪ್ಪ, | ಮೋ.ವಾ.ನಿ | 08532–223329 |
| 5 | ವೆಂಕಟಪ್ಪ | ಮೋ.ವಾ.ನಿ | 08532–223329 |
| 6 | ಎ.ಆರ್. ತಹಿಸಿಲ್ದಾರ | ಶೀಘ್ರಲಿಪಿಗಾರರು | 08532–223329 |
| 7 | ಗೋವಿಂದರಾಯ | ಲೆಕ್ಕಾಅಧಿಕ್ಷಕರು | 08532–223329 |
| 8 | ರಿಕ್ತ | ಅಧೀಕ್ಷಕರು | 08532–223329 |
| 9 | ರಿಕ್ತ | ಅಧೀಕ್ಷಕರು | 08532–223329 |
| 10 | ಡಿ. ರಂಗಯ್ಯ | ಪ್ರ.ದ.ಸ | 08532–223329 |
| 11 | ಜೀನತ ಸಾಜೀದ | ಪ್ರ.ದ.ಸ | 08532–223329 |
| 12 | ಸಾಜೀದ ಹುಸೇನ್ | ಪ್ರ.ದ.ಸ | 08532–223329 |
| 13 | ರವೀಂದ್ರ ರೆಡ್ಡಿ | ದ್ವಿ.ದ.ಸ | 08532–223329 |
| 14 | ರಾಮಕೃಷ್ಣ | ದ್ವಿ.ದ.ಸ | 08532–223329 |
| 15 | ಅರ್ಜುನ | ದ್ವಿ.ದ.ಸ | 08532–223329 |
| 16 | ಹೆಚ್.ಎಸ್. ಬಸವ | ದ್ವಿ.ದ.ಸ | 08532–223329 |
| 17 | ಬಸವ | ದ್ವಿ.ದ.ಸ | 08532–223329 |
| 18 | ರವಿಕಿರಣ | ದ್ವಿ.ದ.ಸ | 08532–223329 |
| 19 | ಕೃಷ್ಣ ಬಿ. ಕಾಲಾಲ್ | ವಾಹನ ಚಾಲಕ | 08532–223329 |
| 20 | ಮಹ್ಮದ್ ರಫೀಕ | ವಾಹನ ಚಾಲಕ | 08532–223329 |
| 21 | ಹೆಚ್. ವಸಂತ | ಅಟೆಂಡರ್ | 08532–223329 |
| 22 | ರಿಕ್ತ | ಖಜಾನೆ ರಕ್ಷಕ | 08532–223329 |
| 23 | ರಾಬಿಯ ಬೇಗಂ | ‘ಡಿ’ ಗ್ರೋಪ್ | 08532–223329 |
| 24 | ಜರೀನಾ ಬೇಗಂ | ‘ಡಿ’ ಗ್ರೋಪ್ | 08532–223329 |
| 25 | ರಿಕ್ತ | ‘ಡಿ’ ಗ್ರೂಪ್ | 08532–223329 |
| 26 | ರಿಕ್ತ | ‘ಡಿ’ ಗ್ರೂಪ್ | 08532–223329 |

**X. 4(ಬಿ)10. ಅದರ ವಿ.ನಿಯಮಗಳಲ್ಲಿ ಉಪ ಸಂಬಂಧಿಸಿರುವಂತೆ ಪರಿಹಾರದ ವ್ಯವಸ್ಥೆಯೂ ಸೇರಿದಂತೆ ಅದರ ಪ್ರತಿಯೊಬ್ಬ ಅಧಿಕಾರಿ ಮತ್ತು ನೌಕರರು ಪಡಿಯುವ ತಿಂಗಳ ವೇತನ**

| ಕ್ರ.ಸಂ. | ಪದನಾಮ | ಹುದ್ದೆ | ವೇತನ |
|---|---|---|---|
| 1 | ಕೆ. ದಾಮೋದರ | .ಪ್ರಾ.ಸಾ.ಅ. ಪ್ರಭಾರಿ | |
| 2 | ಎಂ. ವೆಂಕಟೇಶ್ವರ ರಾವ್ | ಹಿ.ಮೋ.ವಾ.ನಿ | ಮೂಲ ವೇತನ ರೂ. 32,000/– ಹಾಗೂ ಇತರೆ ಅನ್ವಯವಾಗುವ ಭತ್ಯೆಗಳು |
| 3 | ಆರ್.ಬಿ. ಪೊಲೀಸ್ ಪಾಟೀಲ್ | ಹಿ.ಮೋ.ವಾ.ನಿ | ಮೂಲ ವೇತನ ರೂ. 32,000/– ಹಾಗೂ ಇತರೆ ಅನ್ವಯವಾಗುವ ಭತ್ಯೆಗಳು |
| 4 | ಬಿ. ಶಂಕ್ರಪ್ಪ | ಮೋ.ವಾ.ನಿ | ಮೂಲ ವೇತನ ರೂ. 31,200/– ಹಾಗೂ ಇತರೆ ಅನ್ವಯವಾಗುವ ಭತ್ಯೆಗಳು |
| 5 | ವೆಂಕಟಪ್ಪ | ಮೋ.ವಾ.ನಿ | ಮೂಲ ವೇತನ ರೂ. 22,200/– ಹಾಗೂ ಇತರೆ ಅನ್ವಯವಾಗುವ ಭತ್ಯೆಗಳು |
| 6 | ರಿಕ್ತ | ಅಧೀಕ್ಷಕರು | –– |
| 7 | ರಿಕ್ತ | ಅಧೀಕ್ಷಕರು. | – |
| 8 | ಎ.ಆರ್. ತಹಸಿಲ್ದಾರ | ಶೀಘ್ರಲಿಪಿಗಾರರು | ಮೂಲ ವೇತನ ರೂ. 29,500/– ಹಾಗೂ ಇತರೆ ಅನ್ವಯವಾಗುವ ಭತ್ಯೆಗಳು |
| 9 | ಗೋವಿಂದರಾಯ | ಲೆಕ್ಕಧೀಕ್ಷಕರು | ಮೂಲ ವೇತನ ರೂ. 28,100/– ಹಾಗೂ ಇತರೆ ಅನ್ವಯವಾಗುವ ಭತ್ಯೆಗಳು |
| 10 | ಡಿ. ರಂಗಯ್ಯ | ಪ್ರ.ದ.ಸ | ಮೂಲ ವೇತನ ರೂ. 29,600/– ಹಾಗೂ ಇತರೆ ಅನ್ವಯವಾಗುವ ಭತ್ಯೆಗಳು |
| 11 | ಜೀನತ ಸಾಜೀದ | ಪ್ರ.ದ.ಸ | ಮೂಲ ವೇತನ ರೂ. 20,000/– ಹಾಗೂ ಇತರೆ ಅನ್ವಯವಾಗುವ ಭತ್ಯೆಗಳು |
| 12 | ಸೈಯದ್ ಸಾಜೀದ ಹುಸೇನ್ | ಪ್ರ.ದ.ಸ. | ಮೂಲ ವೇತನ ರೂ. 20,000/– ಹಾಗೂ ಇತರೆ ಅನ್ವಯವಾಗುವ ಭತ್ಯೆಗಳು |
| 13 | ರವೀಂದ್ರ ರೆಡ್ಡಿ | ದ್ವಿ.ದ.ಸ | ಮೂಲ ವೇತನ ರೂ. 12,500/– ಹಾಗೂ ಇತರೆ ಅನ್ವಯವಾಗುವ ಭತ್ಯೆಗಳು |
| 14 | ರಾಮಕೃಷ್ಣ | ದ್ವಿ.ದ.ಸ | ಮೂಲ ವೇತನ ರೂ. 12,500/– ಹಾಗೂ ಇತರೆ ಅನ್ವಯವಾಗುವ ಭತ್ಯೆಗಳು |
| 15 | ಅರ್ಜುನ | ದ್ವಿ.ದ.ಸ | ಮೂಲ ವೇತನ ರೂ. 17,650/– ಹಾಗೂ ಇತರೆ ಅನ್ವಯವಾಗುವ ಭತ್ಯೆಗಳು |
| 16 | ಹೆಚ್,ಎಸ್. ಬಸವರಾಜ | ದ್ವಿ.ದ.ಸ | ಮೂಲ ವೇತನ ರೂ. 16,400/– ಹಾಗೂ ಇತರೆ ಅನ್ವಯವಾಗುವ ಭತ್ಯೆಗಳು |
| 17 | ರವಿಕಿರಣ | ದ್ವಿ.ದ.ಸ | ಮೂಲ ವೇತನ ರೂ. 12,500/– ಹಾಗೂ ಇತರೆ ಅನ್ವಯವಾಗುವ ಭತ್ಯೆಗಳು |
| 18 | ಬಸವ | ದ್ವಿ.ದ.ಸ | ಮೂಲ ವೇತನ ರೂ. 11,800/– ಹಾಗೂ ಇತರೆ ಅನ್ವಯವಾಗುವ ಭತ್ಯೆಗಳು |
| 19 | ರಿಕ್ತ | ಬೆರಳಚ್ಚುಗಾರರು | – |
| 20 | ಕೃಷ್ಣ ಬಿ. ಕಲಾಲ | ವಾಹನ ಚಾಲಕ | ಮೂಲ ವೇತನ ರೂ. 13,900/– ಹಾಗೂ ಇತರೆ ಅನ್ವಯವಾಗುವ ಭತ್ಯೆಗಳು |
| 21 | ಮಹ್ಮದ್ ರಫೀಕ | ವಾಹನ ಚಾಲಕ | ಮೂಲ ವೇತನ ರೂ. 13,300/– ಹಾಗೂ ಇತರೆ ಅನ್ವಯವಾಗುವ ಭತ್ಯೆಗಳು |
| 22 | ಹೆಚ್. ವಸಂತಾ | ಅಟೆಂಡರ್ | ಮೂಲ ವೇತನ ರೂ. 18,100/– ಹಾಗೂ ಇತರೆ ಅನ್ವಯವಾಗುವ ಭತ್ಯೆಗಳು |
| 23 | ರಿಕ್ತ | ಖಜಾನೆ ರಕ್ಷಕ | – |
| 24 | ರಾಬಿಯಾ ಬೇಗಂ | 'ಡಿ' ಗ್ರೂಪ್ | ಮೂಲ ವೇತನ ರೂ. 13,300/– ಹಾಗೂ ಇತರೆ |

| | | | |
|---|---|---|---|
| | | | ಅನ್ವಯವಾಗುವ ಭತ್ಯೆಗಳು |
| 25 | ಜರೀನಾ ಬೇಗಂ | 'ಡಿ' ಗ್ರೂಪ್ | ಮೂಲ ವೇತನ ರೂ. 12,500/- ಹಾಗೂ ಇತರೆ ಅನ್ವಯವಾಗುವ ಭತ್ಯೆಗಳು |
| 26 | ರಿಕ್ತ | 'ಡಿ' ಗ್ರೂಪ್ | - |

**XI. 4(ಬಿ) 11. ಎಲ್ಲಾ ಯೋಜನೆಗಳ ವಿವರಗಳನ್ನು ಸೂಚಿಸುವ, ಪ್ರಸ್ತಾವಿತ ವೆಚ್ಚಗಳನ್ನು ಮತ್ತು ಮಾಡಲಾದ ಬಟವಾಡೆಗಳ ವರದಿಯನ್ನು ಸೂಚಿಸಿ, ಅದರ ಪ್ರತಿಯೊಂದು ಏಜೆನ್ಸಿಗೆ ಹಂಚಿಕೆ ಮಾಡಲಾದ ಆಯವ್ಯಯ ಅನುದಾನ ಬಿಡುಗಡೆ – 2016-17 (31.03.2017).**

| ಲೆಕ್ಕಶೀರ್ಷಿಕೆ | ಅನುದಾನ ಬಿಡುಗಡೆ | ಖರ್ಚಿನ ಬಾಬ್ತು | ಉಳಿದ ಹಣ |
|---|---|---|---|
| ಕಛೇರಿ ವೆಚ್ಚಗಳು 051 | 500000 | 496969 | 3031 |
| ವಿದ್ಯುತ್‌ವೆಚ್ಚ 071 | 100000 | 96747 | 3253 |
| ಇಂಧನ ವೆಚ್ಚ 195 | 250000 | 226268 | 23732 |
| ವಿಶೇಷ ಘಟಕ ಯೋಜನೆ(SCP)422 | 2250 | 2250 | - |
| ವಿಶೇಷ ಘಟಕ ಯೋಜನೆ(TSP)423 | 4500 | 4500 | - |
| ರಸ್ತೆ ಸುರಕ್ಷತೆ TC-051(ಯೋಜನೆ) | 200000 | 197401 | 2599 |
| 180 | - | - | - |
| 051 (ವಾಯು ಮಾಲಿನ್ಯ) | 30000 | 29973 | 27 |
| 125 | 0 | 0 | 0 |
| 041 | 0 | 0 | 0 |
| 041 IMV | 0 | 0 | 0 |

**XII. 4(ಬಿ) 12. ಹಂಚಿಕೆ ಮಾಡಲಾದ ಮೊಬಲಗನ್ನೊಳಗೊಂಡು, ಸಹಾಯಧನ ಕಾರ್ಯಕ್ರಮಗಳ ಜಾರಿಯ ವಿಧಾನವನ್ನು ಮತ್ತು ಅಂತಹ ಕಾರ್ಯಕ್ರಮಗಳ ಫಲಾನುಭವಿಗಳ ವಿವರಗಳು.**

ಸಾರಿಗೆ ಇಲಾಖೆಯ ನಿರ್ದೇಶನದ ಮೇರೆಗೆ ಕಛೇರಿ ವ್ಯಾಪ್ತಿಯಲ್ಲಿನ ಪರಿಶಿಷ್ಠ ಜಾತಿ ಹಾಗೂ ಪರಿಶಿಷ್ಠ ಪಂಗಡದ ಯೋಜನೆಯಲ್ಲಿ 2016-17 ಕ್ಕೆ 02 ಅಭ್ಯರ್ಥಿಗಳು ಫಲಾನುಭವಿಗಳಾಗಿರುತ್ತಾರೆ. ವಿವಿಧ ವರ್ಗದ ವಾಹನಗಳ ಚಾಲನಾ ತರಬೇತಿಯನ್ನು ನೀಡಲಾಗುತ್ತಿದೆ. ಸದರಿ ತರಬೇತಿಗೆ ತಗಲುವ ವೆಚ್ಚದ ಶೇ. 25% ರಷ್ಟನ್ನು ಅಭ್ಯರ್ಥಿಗಳು ಭರಿಸಿದರೆ ಸಾರಿಗೆ ಇಲಾಖೆಯೇ ಶೇ 75 ರಷ್ಟು ಭರಿಸುತ್ತದೆ.

**XIII. 4(ಬಿ) 13. ಅದು ನೀಡಿರುವ ರಿಯಾಯಿತಿಗಳನ್ನು ಅನುಮತಿ ಪತ್ರಗಳನ್ನು ಅಥವಾ ಅಧಿಕಾರ ಪತ್ರಗಳನ್ನು ಪಡೆಯುವವರ ವಿವರಗಳು:-**

ಕರ್ನಾಟಕ ಮೋಟಾರು ವಾಹನ ನಿಯಮ 1989ರ ನಿಯಮದ ಪ್ರಕಾರ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡಕ್ಕೆ ಸೇರಿದ ಅರ್ಜಿದಾರರಿಗೆ ಸರ್ಕಾರ ನಿಗಧಿಪಡಿಸಿರುವ ರಹದಾರಿ ಶುಲ್ಕಗಳಲ್ಲಿ ಶೇಕಡ 50 ರಷ್ಟು ವಿನಾಯಿತಿ ಇರುತ್ತದೆ.

**XIV.4(ಬಿ) 14. ಅದರ ಬಳಿ ಲಭ್ಯವಿರುವ ಅಥವಾ ಅದು ಹೊಂದಿರುವ ವಿದ್ಯುನ್ಮಾನ ರೂಪಕ್ಕೆ ಪರಿವರ್ತಿಸಿರುವ ಮಾಹಿತಿಗೆ ಸಂಬಂಧಿಸಿದ ವಿವರಗಳು:**

ವಾಹನಗಳ ನೋಂದಣಿ, ಚಾಲನಾ ಅನುಜ್ಞಾಪತ್ರ, ಚಾಲನಾ ಅನುಜ್ಞಾ ಪತ್ರದ ನವೀಕರಣ, ಹೆಚ್ಚುವರಿ ವಾಹನ ಚಾಲನೆಗೆ ಹಿಂಬರಹ ಶುಲ್ಕ ಪಾವತಿ, ತೆರಿಗೆ ಪಾವತಿ, ಹರದಾರಿ ವಿವರ ಇತ್ಯಾದಿಗಳ ನಿರ್ದಿಷ್ಟಪಡಿಸಿ nic ಯವರು ತಯಾರಿಸಿದ ತಂತ್ರಾಶ ಸಹಾಯದಿಂದ ಗಣಕೀಕರಣಗೊಳಿಸಿ ವಾಹನ ಸಾರಥಿ ಹಾಗೂ ರಹದಾರಿ ಸಾಫ್ಟ್‌ವೇರ್‌ಗಳ ಸಹಾಯದಿಂದ ಈಗಾಗಲೇ ಆರ್‌ಸಿ ರೂಪದ 43203, ಡಿ.ಎಲ್.ರೂಪದ 24524 ಹಾಗೂ ರಹದಾರಿ ರೂಪದ 4275 ವಿದ್ಯನ್ಮಾನ ರೂಪಕ್ಕೆ ಪರಿವರ್ತಿಸಲಾಗಿದೆ

**XV.4(ಬಿ) 15. ಸಾರ್ವಜನಿಕರ ಉಪಯೋಗಕ್ಕಾಗಿ ಗ್ರಂಥಾಲಯವನ್ನು ಅಥವಾ ವಾಚನಾಲಯವನ್ನು ನಿರ್ವಹಿಸುತ್ತಿದ್ದಲ್ಲಿ ಅದರ ಕೆಲಸ ಸಮಯವನ್ನೊಳಗೊಂಡಂತೆ ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಲಭ್ಯವಿರುವ ಸೌಲಭ್ಯಗಳ ವಿವರಗಳು:**

ಸಾರ್ವಜನಿಕರ ಉಪಯೋಗಕ್ಕಾಗಿ ಗ್ರಂಥಾಲಯ ಅಥವಾ ವಾಚನಾಲಯ ಈವರೆಗೆ ಅಸ್ತಿತ್ವದಲ್ಲಿ ಇರುವುದಿಲ್ಲ.

**XVI. 4(ಬಿ) 16. ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರು, ಪದನಾಮ ಮತ್ತು ಇತರ ವಿವರಗಳು.**

1. ಸಾರ್ವಜನಿಕ ಮಾಹಿತಿ ಅಧಿಕಾರಿ ಶ್ರೀ ಕೆ.ದಾಮೋದರ ಪ್ರಾದೇಶಿಕ ಸಾರಿಗೆ ಅಧಿಕಾರಿ, ಪ್ರಭಾರ ರಾಯಚೂರು–584101.

2. ಮೇಲ್ಮನವಿ ಪ್ರಾಧಿಕಾರ ಶ್ರೀ ಪುರುಷೋತ್ತಮ.ಜೆ, ಜಂಟಿ ಸಾರಿಗೆ ಆಯುಕ್ತರು,
   ಕಲಬುರಗಿ ವಿಭಾಗ, ಕಲಬುರಗಿ –585 105.

ಅ) ಈ ಕಛೇರಿಗೆ 2015–16ನೇ ಸಾಲಿನಲ್ಲಿ ಒಟ್ಟು ರೂ. 50,91,00,000/– ರಾಜಸ್ವ ಗುರಿ ನಿಗಧಿಪಡಿಸಲಾಗಿದ್ದು, ಅದರಲ್ಲಿ ಒಟ್ಟು ರೂ. 49,85,47,118/– ನ್ನು ವಸೂಲಿ ಮಾಡಲಾಗಿದ್ದು, 97.92 % ಕೊರತೆ ರೂ. 1,05,52,882/–

ಆ) ಕೇಂದ್ರ ಕಛೇರಿಯಾದ ಮಾನ್ಯ ಸಾರಿಗೆ ಆಯುಕ್ತರ ಕಛೇರಿ, ಬೆಂಗಳೂರಿನಿಂದ ಬಿಡುಗಡೆಯಾದ ವೆಬ್‌ಸೈಟ್ www.rto.kar.nic.in ರಲ್ಲಿ ಹಾಗೂ ಚಾಲನಾ ಅನುಜ್ಞಾ ಪತ್ರಕ್ಕೆ ಸಂಬಂಧಿಸಿದಂತೆ www.Sarathi.nic.in ಮತ್ತು ವಾಹನಗಳ ವಿವರಗಳಿಗೆ www.vahan.nic.in ರಲ್ಲಿ ಪರಿಶೀಲಿಸಿ ಮಾಹಿತಿ ಪಡೆದು ಸಾರ್ವಜನಿಕರು ತಮ್ಮ ಕೆಲಸಕಾರ್ಯಗಳಿಗೆ ಅನುಸರಿಸಬೇಕಾದ ಸೂಕ್ತ ಮಾರ್ಗದರ್ಶನ ಪ್ರಕಟಿಸಲಾಗಿದೆ.

**XVII.** 4(ಬಿ) 17 **ಕಛೇರಿಯಲ್ಲಿ ನಿರ್ವಹಿಸಲಾಗಿರುವ ಎಲ್ಲಾ ಮಾಹಿತಿಗಳನ್ನು ಪ್ರಕಟಿಸಲಾಗಿದೆ. ಮತ್ತು ಮಾಹಿತಿಗಳನ್ನು** 31.03.2017 **ರವರೆಗೆ ಪರಿಷ್ಕರಿಸಲಾಗಿದೆ.**

K. Damodar
Regional Transport Officer I/C
Mantralyam road Raichur-584101
9449864036

(ಕೆ. ದಾಮೋದರ)
ಪ್ರಾದೇಶಿಕ ಸಾರಿಗೆ ಅಧಿಕಾರಿ ಪ್ರಭಾರ ಹಾಗೂ
ಮಾಹಿತಿ ಅಧಿಕಾರಿ, ರಾಯಚೂರು-584101.
9449864036

ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಮೇಲ್ಮನವಿ ಪ್ರಾಧಿಕಾರಿ ವಿವರ

| **ಸಾರ್ವಜನಿಕ ಪ್ರಾಧಿಕಾರ** | **ಮಾಹಿತಿ ಹಕ್ಕು ಅಧಿನಿಯಮ 2005ರ (5)(2)ರ ಅನುಸಾರ ಸಾರ್ವಜನಿಕ ಮಾಹಿತಿ ಅಧಿಕಾರಿ ಪ್ರಾಧಿಕಾರಿ** | **ಮಾಹಿತಿ ಹಕ್ಕು ಅಧಿನಿಯಮ 2005ರ (19)(1)ರ ಅನುಸಾರ ಮೇಲ್ಮನವಿ** |
|---|---|---|
| ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ,<br>ಟಿ.ಟಿ.ಎಂ.ಸಿ. ಕಟ್ಟಡ<br>ಶಾಂತಿನಗರ<br>ಬೆಂಗಳೂರು–560027 | ಪ್ರಾದೇಶಿಕ ಸಾರಿಗೆ ಅಧಿಕಾರಿ,<br>ರಾಯಚೂರು<br>ದೂರವಾಣಿ ಸಂಖ್ಯೆ<br>08532–223329 | ಜಂಟಿ ಸಾರಿಗೆ ಆಯುಕ್ತರು<br>ಕಲಬುರಗಿ ವಿಭಾಗ,<br>ಕಲಬುರಗಿ<br>ಪಿನ್–585105<br>ದೂರವಾಣಿ<br>08472–248005 |

ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ
ಪ್ರಾದೇಶಿಕ ಸಾರಿಗೆ ಅಧಿಕಾರಿ
ರಾಯಚೂರು–ಕೆಎ–36